ಇ) ವಿಜಯನಗರ ಉಕ್ಕು ಸ್ಥಾವರದ ಮೊದಲನೇ ಹಂತಕ್ಕೆ ರೂ. 2000 ಕೋಟಿಗಳು ಆಗಬಹುದೆಂದು ಮತ್ತು ಅಂತಿಮ ಘಟ್ಟಕ್ಕೆ (3 ಎಂಟಿಪಿಎ ಸಾಮರ್ಥ್ಯ ತಲುಪಿದಾಗ) ರೂ 5000 ಕೋಟಿಗಳು ಆಗಬಹುದೆಂದು ಅಂದಾಜು ಮಾಡಲಾಗಿದೆ. ಈ ಯೋಜನೆಗೆ ಸಂಬಂಧಪಟ್ಟ ಎಲ್ಲಾ ತರಪುಗಳು ಬಂದ 36 ರಿಂದ 48 ತಿಂಗಳುಗಳ ಒಳಗಾಗಿ ಉತ್ಪಾದನಾ ಕಾರ್ಯವನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯು 1994-95ನೇಸಾಲಿಯ ಒಳಗೆ ಉತ್ಪಾದನಾ ಕಾರ್ಯಕ್ರಮವನ್ನು ಪ್ರಾರಂಭಿಸಲು ಊಹಿಸಲಾಗಿದೆ.

ಎ) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆರ್ಥಿಕ ಆಯುಕ್ತರು ಹಣಕಾಸು ಇಲಾಖೆ, ಆಯುಕ್ತರು ಮತ್ತು ಕಾರ್ಯದರ್ಶಿಗಳಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕೆಎಸ್ಐಐಡಿಸಿ ಮತ್ತು ಶ್ರೀ ರವಿರೂಯ ಶ್ರೀ ವೆಂಕಟೇಶನ್, ಶ್ರೀ ದ್ವಾರಕಾನಾಥ್ ಡಾ: ಇ.ಆರ್. ಚಂದ್ರಶೇಖರ್ ಇವರುಗಳನ್ನೊಳಗೊಂಡಂತೆ ಒಂದು ಯೋಜನಾ ಸಮಿತಿಯನ್ನು ರಚಿಸಲಾಗಿ ಇದು ಆಗಿಂದಾಗ್ಗೆ ಸಭೆ ಸೇರಿ ಈ ಘಟಕದ ಬಗ್ಗೆ ಕೂಲಂಕುಷವಾಗಿ ಚರ್ಚಿಸುತ್ತಿರುತ್ತದೆ. ಹಾಗೂ ಈ ಘಟಕವನ್ನು ಸ್ಥಾಪಿಸುವ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳಲಿದೆ.

ಬಿ) ಶ್ರೀ ಇ.ಆರ್. ಚಂದ್ರಶೇಖರ್ ಮಾಜಿ ಉಪಾಧ್ಯಕ್ಷರು ಎಸ್ಎಐಎಲ್ ಮತ್ತು ಮಾಜಿ ಕಾರ್ಯ ನಿರ್ವಾಹಕ ನಿರ್ದೇಶಕರು, ಬಿಲ್ಲಾಯ್ ಸ್ಟೀಲ್ ರವರನ್ನು ಈ ಯೋಜನೆಯ ಕಾರ್ಯ ನಿರ್ವಾಹಕರಾಗಿ ನೇಮಿಸಲಾಗಿದೆ.

ಸಿ) ಈ ಘಟಕಕ್ಕೆ ಚೀನಾ ದೇಶದ ತಾಂತ್ರಿಕ ಸಹಯೋಗದ ನೆರವನ್ನು ಪಡೆಯಲಾಗುತ್ತಿದೆ.

ಡಿ) ಮೆಕಾನ್ (ಭಾರತ ಸರ್ಕಾರದ ಉದ್ದಿಮೆ) ಎಂಬ ಸಂಸ್ಥೆಯಿಂದ ಟೆಕ್ನೋ ಎಕಾನಾಮಿಕ್ ಪಿಸಿಬಿಲಿಟಿ ರಿಪೋರ್ಟನ್ನು ಪಡೆಯಲಾಗುತ್ತಿದೆ. ಈ ವರದಿಯು ಇನ್ನೂ ಕಲವೇ ವಾರಗಳಲ್ಲಿ ಪಡೆಯುವ ನಿರೀಕ್ಷೆಯಿದೆ.

ಇ) ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಮೆ: ರೈಟ್ಸ್ ಎಂಬ ಸಂಸ್ಥೆಗೆ ಕೆಎಸ್ಐಐಡಿಸಿ ಯು ಕಲ್ಲಿದ್ದಲು, ಸ್ಟೀಮ್ ಕೋಲ್ ಖನಿಜಗಳನ್ನು ರೈಲು ಹಾಗೂ ಸಮುದ್ರ ಮಾರ್ಗಗಳಲ್ಲಿ ಕೊಂಡೊಯ್ಯುವ ಬಗ್ಗೆ ಒಂದು ಸವಿಸ್ತರವಾದ ವರದಿಯನ್ನು ಪಡೆಯಲಾಗಿದೆ.

ಎಫ್) ರಾಜ್ಯ ಸರ್ಕಾರವು ಸುಮಾರು ರೂ. 5 ಕೋಟಿಗಳನ್ನು ಪ್ರಸ್ತುತ ವರ್ಷದಲ್ಲಿ ಈ ಘಟಕಕ್ಕೆ ವೆಚ್ಚ ಮಾಡುವ ನಿರೀಕ್ಷೆಯಿದೆ.

ಹುಬ್ಬಳ್ಳಿ ಉದ್ಯೋಗ ವಿನಿಮಯ ಕಛೇರಿಯ ಬಗ್ಗೆ.

3693 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ಹುಬ್ಬಳ್ಳಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗದ ಸಲುವಾಗಿ ನೋಂದಣಿ ಮಾಡಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಆ) ಸರ್ಕಾರದ ವಿವಿಧ ಮಂಡಳಿ ಮತ್ತು ನಿಗಮ ಹಾಗೂ ಇಲಾಖೆಗಳಿಂದ ವಿನಿಮಯ ಕೇಂದ್ರಕ್ಕೆ ಜಾಹೀರಾತುಗಳನ್ನು ಕಳುಹಿಸಿಕೊಡುತ್ತಿದ್ದರೂ ಈ ಬಗ್ಗೆ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿಯನ್ನು ನೀಡದೆ ತಮಗೆ ಬೇಕಾದವರಿಗೆ ಸಂದರ್ಶನಗಳನ್ನು ಕಳುಹಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಇನ್ನು ಮುಂದೆ ಉದ್ಯೋಗ ವಿನಿಮಯ ಕೇಂದ್ರಕ್ಕೆ ನೇಮಕಾತಿ ಜಾಹೀರಾತುಗಳನ್ನು ಕಳುಹಿಸದೇ ವೃತ್ತ ಪತ್ರಿಕೆಗಳ ಮೂಲಕ ಜಾಹೀರಾತು ನೀಡಿದರೆ ನಿರುದ್ಯೋಗಿಗಳಿಗೆ ಸಹಾಯವಾಗುವುದಿಲ್ಲವೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 94,381 (ಜೂನ್ 1991ರ ಅಂತ್ಯದ ವರೆಗೆ)

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕೃಷಿ ಕಾರ್ಮಿಕರ ಸಂಖ್ಯೆ.

3694 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಇವರುಗಳಿಗೆ ವಿಮಾ ಯೋಜನೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಇ) ಇದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) 1981ರ ಜನಗಣತಿಯ ವರದಿಯ ಮೇರೆಗೆ ರಾಜ್ಯದಲ್ಲಿ 36,55,000 ಕೃಷಿ ಕಾರ್ಮಿಕರು ಮತ್ತು 8,16,900ಕಾರ್ಮಿಕರು ಕೈಗಾರಿಕೆಗಳಲ್ಲಿ ಮತ್ತು ಇತರೇ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ.

ಆ) ಇವರುಗಳಿಗೆ ವಿಮಾ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇ) ಉಪ ಪ್ರಶ್ನೆ "ಆ" ಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವ.ಕ. ಜಿಲ್ಲೆಯಲ್ಲಿ ವೈದ್ಯರ ಕೊರತೆ.

3708 - ಶ್ರೀ ಬಿ. ರಾಮನಾಥ್ ರೈ (ಬಂಟ್ವಾಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇದೆ?

ಆ) ಸಾಕಷ್ಟು ಸ್ಥಳಗಳಲ್ಲಿ ವೈದ್ಯರುಗಳ ನೇಮಕಾತಿಯಾಗಿದ್ದರೂ ಕೂಡ ಅವರಲ್ಲಿ ಕೆಲಸಕ್ಕೆ ಸೇರ್ಪಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮವೇನು?

ಈ) ಈ ಪೈಕಿ ಬಂಟ್ವಾಳ ತಾಲ್ಲೂಕಿನ ಆಸ್ಪತ್ರೆಯಲ್ಲಿ ಎಷ್ಟು ವೈದ್ಯರುಗಳ ಕೊರತೆ ಇದೆ. ದನ್ನು ಯಾವಾಗ ತುಂಬಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ 10 ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆ ಖಾಲಿ ಇದೆ.